> ಮಗಳ ಮೊದಲ ಕವನ ವಾರಪತ್ರಿಕೆಯೊಂದರಲ್ಲಿ ಬೆಳಕು ಕಂಡು, ಪತ್ರಿಕೆ ಮನೆಗೆ ಬಂದ ದಿನ ಕಿವಿಯಲ್ಲಿ ಗಾಳಿ ಹೊಕ್ಕ ಎಳೆಗರುವಿನಂತೆ ಮಗಳು ಕುಣಿಕುಣಿದಾಡಿದ್ದಳು. ಪತ್ರಿಕೆಯಲ್ಲಿ ಅಚ್ಚಾದ ತನ್ನ ಹೆಸರನ್ನು ಪದೇಪದೇ ನೋಡಿಕೊಳ್ಳುತ್ತಾ ಸಂಭ್ರಮದ ಪರಾಕಾಷ್ಠೆಗೇರಿದ್ದಳು. ಹೆಚ್ಚೂಕಮ್ಮಿ ಅವಳದೇ ಪ್ರಾಯದಲ್ಲಿ ಪೇಪರಿನಲ್ಲಿ ಬಂದಿದ್ದ ತನ್ನ ಕವಿತೆಯನ್ನು ತಾನು ಸಡಗರಿಸಿದ್ದರ ನೆನಪಾಗಿತ್ತು ರೋಹಿಣಿಗೆ.

ಷಡ್ರಸೋಪೇತ ಭೋಜನವೂ ಬೇಕಾಗಿಲ್ಲ ಎನಿಸುವ ಸೊಗಸು. ಮಗಳಿಗೂ ಅಷ್ಟೇ. ಗಂಜಿ ಊಟ ಅಂದರೆ ಯಾವತ್ತಿಗೂ ಪ್ರಿಯ. ಒಂದು ಕಾಯಿ ಒಡೆದು ಅರೆದು, ತೆಂಗಿನ ಹಾಲು ಬೆರೆಸಿದರಂತೂ, ಆಹಾ...

"ಒಬ್ಬಳೇ ಹೇಗೆ ಕಾಲ ಕಳೀತಿ ಅಮ್ಮಾ? ಬಂದ್ಬಿಡು ಅಲ್ಲಿಗೇ..." ಜವಾಬ್ದಾರಿ ನಿರ್ವಹಿಸಲು ಸಿದ್ಧಳಾಗಿದ್ದಳು ಹೊತ್ತು, ಹೆತ್ತ ಮಗಳು.

"ಬರೋದೇ, ಆದ್ರೆ ಈಗಲ್ಲ..."

"ಮತ್ತ್ಯಾವಾಗ? ಕವಡೆ ಹಾಕಿ ಶಾಸ್ತ್ರ ಕೇಳ್ಬೇಕಾ ನೀನು?"

"ಹಾಗಲ್ಲ ಕಂದಾ. ಹಳ್ಳೀಲಿ ಇದ್ದಿದ್ದು ಇದೇ ಅಭ್ಯಾಸ ಆಗ್ಬಿಟ್ಟಿದೆ. ಪೇಟೆ, ಗಜಿಬಿಜಿ, ಅಂಗಳ, ತೋಟ ಇಲ್ಲದ ಸಣ್ಣ ಮನೆ ಅಂದ್ರೆ ಉಸಿರು ಕಟ್ಟೋ ಹಾಗಾಗುತ್ತೆ."

"ನೀನು ಹುಟ್ಟಿ ಬೆಳೆದಿದ್ದು ಪೇಟೇಲಿ ಅನ್ನೋದನ್ನ ಮರೆತುಬಿಟ್ಟಿದೀಯಾ?"

"ಅದೆಲ್ಲಾ ಯಾವುದೋ ಹಿಂದಿನ ಜನ್ಮದ ನೆನಪು ಅನ್ನೋ ಹಾಗಾಗಿದೆ ಕಣೇ..." ಪ್ರಾಮಾಣಿಕವಾಗಿ ಹೇಳಿದ್ದಳು ರೋಹಿಣಿ.

"ಮುದುಕಿ ಹಾಗೆ ಮಾತಾಡ್ಬೇಡ ಅಮ್ಮಾ, ಎಷ್ಟೊರ್ಷ ನಿಂಗೆ?"

"ಎಷ್ಟೋ. ಅದನ್ನ ಕಟ್ಕೊಂಡು ಏನಾಗ್ಬೇಕಾಗಿದೆ?"

"ಹೇಳು ಅಂದ್ರೆ ಹೇಳ್ಬೇಕು..."

"ನಲವತ್ತೆಂಟು ಅಂದ್ಕೋ."

"ನೋಡಿದ್ಯಾ? ಮುದುಕಿ ಹಾಗೆ ಮಾತಾಡ್ಬೇಡ ಅಂದಿದ್ದು ಅದಕ್ಕೇ. ನಲವತ್ತೆಂಟು ಅಂದ್ರೆ ಯಾವ ಮಹಾ ವಯಸ್ಸು?"

"ಅದಕ್ಕೆ? ನನ್ನ ಏನು ಮಾಡು ಅಂತಿ?"

ಅಪ್ಪನ ನೆನಪಿನಿಂದ ಮಗಳ ಕಣ್ಣಲ್ಲಿ ನೀರು ತುಂಬತೊಡಗಿದೆ. ತಾನೇ ಅವಳನ್ನು ಸಂತೈಸಿದ್ದಳು ರೋಹಿಣಿ.

"ಯಾರ ಆಯುಷ್ಯ ಎಷ್ಟು ಅಂತ ಯಾರಿಗೆ ಗೊತ್ತಿರುತ್ತೆ ಕಂದಾ? ಕರೆ ಬಂದಾಗ ಬಿಟ್ಟಿದ್ದು ಬಿಟ್ಟ ಹಾಗೆ ಹೊರಡ್ಲೇಬೇಕಲ್ಲ?"

ಮಾತಿಗೊಂದು ಮಾತು ಕೊಂಡಿ ಕೂಡಿಸಿಕೊಳ್ಳುತ್ತಾ ಶಾಂಭವಿ ಹೇಳಿದ್ದಳು,